# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2010-11ನೇ ಸಾಲಿನಿಂದ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ-00-800-ಇತರೆ ವೆಚ್ಚಗಳು-29 "ಮೀನು ತತ್ತಿಗಳು" ಎಂಬ ಹೊಸ ಯೋಜನೆಯ ಪ್ರಾರಂಭಿಸುವಿಕೆ.

ಓದಲಾಗಿದೆ:- ಪತ್ರ ಸಂಖ್ಯೆ:ಪಂವಾಯೋ/9/2010-11 ದಿನಾಂಕ:15-04-2010, 17-05-2010, 01-06-2010 ಮತ್ತು 03-07-2010.

******

## ಪ್ರಸ್ತಾವನೆ:

ಮಾನ್ಯ ಮುಖ್ಯಮಂತ್ರಿಯವರು 2010-11ರ ಆಯವ್ಯಯ ಭಾಷಣದಲ್ಲಿ ರಾಜ್ಯದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು 2010-11ರಲ್ಲಿ 25 ಕೋಟಿ ಮೀನುಮರಿಗಳನ್ನು ಉತ್ಪಾದಿಸಲು ರೂ.2.5 ಕೋಟಿ ವೆಚ್ಚ ಮಾಡಲಾಗುವುದು ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರಗಳಲ್ಲಿ, ರಾಜ್ಯದಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸುಮಾರು 2.75 ಲಕ್ಷ ಮೆಟ್ರಿಕ್ ಟನ್‌ನಷ್ಟು ಮೀನು ಉತ್ಪಾದನೆ ಮಾಡುವ ಸಾಮರ್ಥ್ಯವಿದ್ದರೂ, ಪ್ರಸ್ತುತ ಶೇ.50ರಷ್ಟನ್ನು ಅಂದರೆ ವಾರ್ಷಿಕ ಗರಿಷ್ಠ 1.40 ಲಕ್ಷ ಟನ್ ಮೀನನ್ನು ಮಾತ್ರ ಉತ್ಪಾದಿಸಲು ಸಾಧ್ಯವಾಗಿರುತ್ತದೆ. ರಾಜ್ಯದಲ್ಲಿರುವ ಎಲ್ಲಾ ಅರ್ಹ ಜಲಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳಲು ಸುಮಾರು 25 ರಿಂದ 30 ಕೋಟಿ ಬಿತ್ತನೆ ಮೀನುಮರಿಗಳ ಲಭ್ಯತೆಯ ಅವಶ್ಯಕತೆ ಇದೆ. ಆದರೆ, ಈಗ ರಾಜ್ಯದ ಸರ್ಕಾರಿ ವಲಯದ ಮೀನುಮರಿಗಳ ಉತ್ಪಾದನಾ ಕೇಂದ್ರಗಳಿಂದ ಗರಿಷ್ಠ 10 ರಿಂದ 12 ಕೋಟಿ ಬಿತ್ತನೆ ಮೀನುಮರಿಗಳನ್ನು ಮಾತ್ರ ಸರಬರಾಜು ಮಾಡಲು ಸಾಧ್ಯವಾಗಿರುತ್ತದೆ. ಉಳಿದ 15 ಕೋಟಿ ಬಿತ್ತನೆ ಮೀನುಮರಿಗಳ ಸರಬರಾಜಿಗೆ ಮೀನುಮರಿ ಕೇಂದ್ರಗಳ ನಿರ್ಮಾಣ, ಉನ್ನತೀಕರಣ ಮತ್ತು ದುರಸ್ತಿಯ ಅವಶ್ಯಕತೆ ಇದ್ದು, ಈ ನಿಟ್ಟಿನಲ್ಲಿ ಇಲಾಖೆಯು ಬೀದರ್ ಜಿಲ್ಲೆಯಲ್ಲಿ ಕಾರಂಜಾ ಮೀನುಮರಿ ಉತ್ಪಾದನಾ ಕೇಂದ್ರವನ್ನು ಹಾಗೂ ಮೈಸೂರು ಜಿಲ್ಲೆಯಲ್ಲಿ ನುಗು ಮೀನುಮರಿ ಉತ್ಪಾದನಾ ಕೇಂದ್ರಗಳನ್ನು ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಬೀದರ್ ಜಿಲ್ಲೆಯಲ್ಲಿ ಯಾವುದೇ ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರ ಇರುವುದಿಲ್ಲ. ಆದುದರಿಂದ, 2010-11ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಕಾರಂಜಾ ಮೀನುಮರಿ ಉತ್ಪಾದನಾ ಕೇಂದ್ರವನ್ನು ಹೊಸದಾಗಿ ನಿರ್ಮಾಣ ಮಾಡಲಾಗುವುದು. ಬೀದರ್ ಜಿಲ್ಲೆಯ ಕಾರಂಜಾ ಮೀನುಮರಿ ಉತ್ಪಾದನಾ ಕೇಂದ್ರದ ಒಟ್ಟು ವಿಸ್ತೀರ್ಣ 4.00 ಹೆಕ್ಟೇರ್‌ಗಳಿದ್ದು, ಇದರಲ್ಲಿ 2.8 ಹೆಕ್ಟೇರ್ ಜಲವಿಸ್ತೀರ್ಣದ ಕೊಳಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ರೂ.1.00 ಕೋಟಿ ಅವಶ್ಯಕತೆ ಇದ್ದು, ಸದರಿ ಕೇಂದ್ರದ ನಿರ್ಮಾಣದಿಂದ 60 ಲಕ್ಷ ಬಿತ್ತನೆ

ಮೈಸೂರು ಜಿಲ್ಲೆಯ ನುಗು ಮೀನುಮರಿ ಉತ್ಪಾದನಾ ಕೇಂದ್ರದ ಒಟ್ಟು 9001.52 ಹೆಕ್ಟೇರ್ ಜಲವಿಸ್ತೀರ್ಣದ ಒಟ್ಟು 1080 ಮೀನುಗಾರಿಕೆ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ಕೆರೆಗಳಿರುತ್ತವೆ. ಇದಲ್ಲದೆ 8585 ಹೆಕ್ಟೇರ್‌ಗಳ 3 ಜಲಾಶಯಗಳಿರುತ್ತವೆ ಹಾಗೂ 5 ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳಿರುತ್ತವೆ. ಆದರೆ, ಮೈಸೂರು ಜಿಲ್ಲೆಯ ಒಳನಾಡು ಜಲಸಂಪನ್ಮೂಲಗಳ ಅಭಿವೃದ್ಧಿಗಾಗಿ ಹೆಚ್.ಡಿ.ಕೋಟೆಯಲ್ಲಿ ನುಗು ಮೀನುಮರಿ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವುದು ಅತ್ಯವಶ್ಯಕವಾಗಿರುತ್ತದೆ. ಸದರಿ ಮೀನುಮರಿ ಉತ್ಪಾದನಾ ಕೇಂದ್ರದ ಒಟ್ಟು ವಿಸ್ತೀರ್ಣ 10 ಹೆಕ್ಟೇರ್‌ಗಳಿದ್ದು, ಇದರಲ್ಲಿ 7 ಹೆಕ್ಟೇರ್ ಜಲವಿಸ್ತೀರ್ಣದ ಕೊಳಗಳ ನಿರ್ಮಾಣಕ್ಕಾಗಿ ರೂ.1.50 ಕೋಟಿ ಅವಶ್ಯಕತೆ ಇದ್ದು, ಇದರಿಂದ 2 ಕೋಟಿ ಬಿತ್ತನೆ ಮೀನುಮರಿಗಳನ್ನು ಉತ್ಪಾದಿಸಲು ಉದ್ದೇಶಿಸಲಾಗಿದೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ 91 ಮೀಇಂಯೋ 2010, ಬೆಂಗಳೂರು ದಿನಾಂಕ:04-08-2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಬೀದರ್ ಜಿಲ್ಲೆಯಲ್ಲಿ ಕಾರಂಜಾ ಮೀನುಮರಿ ಉತ್ಪಾದನಾ ಕೇಂದ್ರವನ್ನು ಹೊಸದಾಗಿ ನಿರ್ಮಾಣ ಮಾಡಲು ಮತ್ತು ಅದರ ಉನ್ನತೀಕರಣಕ್ಕಾಗಿ ರೂ.1.00 ಕೋಟಿ ಹಾಗೂ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆಯಲ್ಲಿ ನುಗು ಮೀನುಮರಿ ಉತ್ಪಾದನಾ ಕೇಂದ್ರದ ಸ್ಥಾಪನೆ ಮಾಡಲು ಮತ್ತು ಅದರ ಉನ್ನತೀಕರಣಕ್ಕಾಗಿ ರೂ.1.50 ಕೋಟಿ ಹೀಗೆ ಒಟ್ಟು ರೂ.2.50 ಕೋಟಿ (ಎರಡು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳ ಹೊಸ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಡಿ.ಎಂ.ರಾಜಣ್ಣ) 4/8/10
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ.
4) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ.ಹಾಗೂ ಪ.ಸಂ.ಮೀ. ಇಲಾಖೆ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-2 ಮತ್ತು 4)



ಈ ನಕಲು::